ದಿನಾಂಕ 27-10-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 5 ನೇ ಪ್ರತಿವಾದಿ ಪರ ಶ್ರೀ ಸಿ.ಆರ್.ಪಿ. ವಕೀಲರಿಂದಃ**

ನನ್ನ ತಮ್ಮಂದಿರಾದ ರಾಮಪ್ಪ ವಿದ್ಯಾಭ್ಯಾಸ ಮಾಡಿರುವುದಿಲ್ಲ, ಲಕ್ಷ್ಮಪ್ಪ 6 ನೇ ತರಗತಿವರೆಗೆ ಓದಿರುತ್ತಾರೆ. ನನ್ನ ತಮ್ಮ ಲಕ್ಷ್ಮಪ್ಪನ ಸಹಿಯನ್ನು ಗುರುತಿಸಲಾರೆ. ನಿಡಿ 1 ರಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವ ಹನುಮಂತಪ್ಪ ದೊಡ್ಡಪ್ಪ ಕೂನಬೇವು ಎಂಬುವವರು ನಮ್ಮ ಗ್ರಾಮದವರು. ಎಸ್.ಎಂ. ಕುರಡೆಪ್ಪನವರ, ದಿಳ್ಳೆಪ್ಪ ಹಾಗೂ ರಾಜಪ್ಪ ಯಾರೆಂದು ನನಗೆ ತಿಳಿದಿಲ್ಲ. ನನ್ನ ತಂದೆ ಹಾಗೂ ತಮ್ಮಂದಿರು ದಾವಾ 3 ನೇ ಸ್ವತ್ತನ್ನು **ನಿ.ಡಿ.1** ರ ಕ್ರಯಪತ್ರದಂತೆ ರೂ.33,000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ನಿಡಿ 1 ನ್ನು ರದ್ದುಪಡಿಸುವಂತೆ ತಾಲೂಕ ಕಚೇರಿಗಾಗಲೀ ಅಥವಾ ನ್ಯಾಯಾಲಯಕ್ಕಾಗಲೀ ನಾನು ಕೇಳಿರುವುದಿಲ್ಲ. ಕಾನೂನುಬದ್ಧವಾಗಿ ಮಾರಾಟ ಮಾಡಿರುವುದರಿಂದ ನಾನು ರದ್ದು ಮಾಡಲು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. 2007 ರಿಂದ ಇಲ್ಲಿಯವರೆಗೂ 5 ನೇ ಪ್ರತಿವಾದಿಯೇ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಪ್ರಸ್ತುತ ಯಾರು ಸ್ವಾಧೀನದಲ್ಲಿರುತ್ತಾರೆ ಎಂದು ನನಗೆ ತಿಳಿದಿಲ್ಲ.

2. ಖರೀದಿ ಆದ ನಂತರ ದಾರಿ ಸಂಬಂಧ ತಕರಾರು ಉಂಟಾಗಿದ್ದರಿಂದ 5 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ವಿರುದ್ಧ ದಿನಾಂಕ 13-01-2022 ರಂದು ರಾಣೇಬೆನ್ನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಹಾಗೂ ಪೊಲೀಸ್ ಉಪ ಅಧೀಕ್ಷಕರಿಗೆ ಮನವಿ ಸಲ್ಲಿಸಿದ್ದರು ಎಂದರೆ ನನಗೆ ತಿಳಿದಿಲ್ಲ. ಖರೀದಿ ಆದ ನಂತರ ನಮ್ಮ ಸ್ವತ್ತನ್ನು ಹಿಸ್ಸೆಗಳಾಗಿ ವಿಂಗಡಿಸಿ ರೆವೆನ್ಯೂ ಸ್ಕೆಚ್ ಮಾಡಲಾಯಿತು ಎಂದರೆ ನನಗೆ ತಿಳಿದಿಲ್ಲ.

ಅದರಂತೆ ಸ್ವಾಧೀನ ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 2007 ರಲ್ಲಿ ಖರೀದಿ ಪ್ರಕ್ರಿಯೆ ಮುಗಿದಿದ್ದು ಕೇವಲ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಹಾಗೂ ಅವರಿಂದ ಆಸ್ತಿಯನ್ನು ಕಬಳಿಸುವ ಸಲುವಾಗಿ ವಾದಿಗಳು ಹಾಗೂ 1 ರಿಂದ 4 ನೇ ಪ್ರತಿವಾದಿಗಳು ಶಾಮೀಲಾಗಿ ಸುಳ್ಳು ದಾವೆ ಹೂಡಲಾಗಿದೆ ಎಂದರೆ ಸರಿಯಲ್ಲ.

**1 ರಿಂದ 4 ನೇ ಪ್ರತಿವಾದಿಗಳು ಏಕಪಕ್ಷೀಯವಾಗಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.